
ವಿಶ್ವದ ಶ್ರೇಷ್ಠ ದಾರ್ಶನಿಕರಲ್ಲಿ ಕನ್ನಡದ ಬಸವಣ್ಣನೂ ಒಬ್ಬ. ಆದರೆ, ಬಹುತೇಕ ದಾರ್ಶನಿಕರ ಚಿಂತನೆಗಳು ಬುದ್ಧಿಜನ್ಯವಾದರೆ, ಬಸವಣ್ಣನ ವಿಚಾರಗಳು ಅನುಭವಜನ್ಯವಾದವು. ನಡೆ–ನುಡಿ ಎರಡೂ ಒಂದಾದ ಕಾರಣದಿಂದಲೇ ಬಸವಣ್ಣ ಎಲ್ಲ ಕಾಲಕ್ಕೂ ಪ್ರಸ್ತುತ. ಕೋವಿಡ್‌ನ ಸಂಕಟದ ಸಮಯದಲ್ಲಿ ದಯೆ ಮತ್ತು ಮಾನವೀಯತೆ ಕೇಂದ್ರವಾಗುಳ್ಳ ಹಾಗೂ ಜನಸಾಮಾನ್ಯರನ್ನು ಸಮಾಜದ ಪ್ರಮುಖ ಭಾಗವಾಗಿ ನೋಡುವ ಬಸವಮಾರ್ಗದ ಪರಿಕಲ್ಪನೆ ಮತ್ತಷ್ಟು ಮಹತ್ವದ್ದು. ಮೇ 14ರ ‘ಬಸವ ಜಯಂತಿ’ ಹಿನ್ನೆಲೆಯಲ್ಲಿ ಸಮಕಾಲೀನ ಬಿಕ್ಕಟ್ಟುಗಳಿಗೆ ಉತ್ತರದ ರೂಪದಲ್ಲಿ ಬಸವಣ್ಣನನ್ನು ಕಾಣುವ ಪ್ರಯತ್ನ ಇಲ್ಲಿದೆ.

■ ವಿ.ಆರ್‌.



ವೃತ್ತಿಯೂ ಕೀಳಾಗಿರದ ಮೇಲರಿಮೆಯಿಂದ ಕೂಡಿರದ ಕಾಯಕಪ್ರಜ್ಞೆ ಅದು. ಬದುಕಲಿಕ್ಕೆ ಒಂದು ಕೆಲಸ ಬೇಕು, ಆ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಬೇಕು ಎನ್ನುವುದು ಶರಣರ ನಂಬಿಕೆಯಾಗಿತ್ತು. ನಮ್ಮ ಇಂದಿನ ದುಡಿಮೆಯ ಉದ್ದೇಶ ಹೊಟ್ಟೆ ತುಂಬಿಸಿಕೊಳ್ಳುವುದಷ್ಟೇ ಆಗಿರುವುದಿಲ್ಲ, ಸಂಪತ್ತಿನ ಸಂಗ್ರಹವೂ ಆಗಿರುತ್ತದೆ. ಆದರೆ, ಶರಣರ ಪ್ರಕಾರ ಆ ದಿನದ ಅಗತ್ಯಕ್ಕಿಂತ ಹೆಚ್ಚು ಸಂಗ್ರಹಿಸಿದರೆ ಅದು ಅತ್ಯಾಸೆ. ಇನ್ನು, ಕಾಯಕ ನಮ್ಮ ಹೊಟ್ಟೆ ತುಂಬಿಸಿದರಷ್ಟೇ ಸಾಲದು. ಅತಿಥಿ ಅಭ್ಯಾಗಥರ ಉಪಚಾರಕ್ಕೂ ಆ ಕಾಯಕ ವಿನಿಯೋಗಬೇಕು. ಇದು ಬಸವಣ್ಣನವರ ಅನುಭವ ಮಂಟಪದ ಕಾಯಕ ತತ್ವ ಹಾಗೂ ದಾಸೋಹದ ಪರಿಕಲ್ಪನೆ.

ಇಹ ಪರ ಎನ್ನುವುದು ಬಸವಣ್ಣನವರ ಪಾಲಿಗೆ ಬೇರೆ ಬೇರೆಯಲ್ಲ. ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೊ ಎನ್ನುವ ಬಸವಣ್ಣ, ‘ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ’ ಎನ್ನುತ್ತಾರೆ. ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಒಳಿತು ಕೇಡುಗಳ ಸ್ವರೂಪವನ್ನು ಅತ್ಯಂತ ಸರಳವಾಗಿ ಮನದಟ್ಟು ಮಾಡಿಸುತ್ತಾರೆ. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ ಎಂದು ಉದ್ಗರಿಸುವ ಅವರು, ‘ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ’ ಎನ್ನುವ ನಿಲುವು ವ್ಯಕ್ತಪಡಿಸಿದ್ದಾರೆ. ಅಲ್ಲಿ ಸಲ್ಲುವ ಉದ್ದೇಶದಿಂದ ಇಲ್ಲಿ ಅನುಸರಿಸುವ ಒಣಭಕ್ತಿಯ ಮಾರ್ಗವನ್ನು ಬಸವಣ್ಣ ವಿಡಂಬನೆ ಮಾಡುತ್ತಾರೆ. ‘ನೀರ ಕಂಡಲ್ಲಿ ಮುಳುಗುವರಯ್ಯಾ, ಮರವ ಕಂಡಲ್ಲಿ ಸುತ್ತುವರಯ್ಯಾ’ ಎನ್ನುವ ಅವರು, ಬತ್ತುವ ಜಲವ, ಒಣಗುವ ಮರವ ನಂಬುವವರನ್ನು ಕಂಡು ಮರುಗುತ್ತಾರೆ. ಹಾಗಾದರೆ, ಬಸವಮಾರ್ಗದ ಭಕ್ತಿಯ ರೂಪ ಯಾವುದು?

ಅದು ಕಾಯಕದ ಮೂಲಕ ಅಭಿವ್ಯಕ್ತಿಗೊಳ್ಳುವ ಭಕ್ತಿ. ಬಸವಣ್ಣ ‘ಕಾಯಕವೇ ಕೈಲಾಸ’ ಎನ್ನುತ್ತಾನೆ. ಆ ಕಾಯಕಮಾರ್ಗದ ಸ್ವರೂಪವನ್ನು ಅತ್ಯಂತ ಸೊಗಸಾಗಿ ಕಟ್ಟಿಕೊಟ್ಟಿರುವುದು ಆಯ್ದಕ್ಕಿ ಮಾರಯ್ಯ. ‘ಕಾಯಕದಲ್ಲಿ ನಿರತನಾದಡೆ / ಗುರು ದರ್ಶನವಾದಡು ಮರೆಯಬೇಕು / ಲಿಂಗ ಪೂಜೆಯಾದಡು ಮರೆಯಬೇಕು / ಜಂಗಮ ಮುಂದಿದ್ದಡು ಹಂಗು ಹರಿಯಬೇಕು’. ಕಾಯಕದ ಮಹತ್ವವನ್ನು ಇಷ್ಟು ಸೊಗಸಾಗಿ ಹೇಳುವ ಮತ್ತೊಂದು ವಚನವಿಲ್ಲ. ಮಾರಯ್ಯನಿಗೆ ಕಾಯಕವೇ ಲಿಂಗಪೂಜೆಯ ಮಾರ್ಗ. ಇಂಥ ಮಹಾನ್ ಶರಣನೂ ಒಮ್ಮೆ ಹೆಚ್ಚು ಅಕ್ಕಿಯನ್ನು ಆಯ್ದು ತಂದಾಗ, ಆತನ ಪತ್ನಿ ಲಕ್ಕಮ್ಮ ಆಕ್ಷೇಪಿಸುತ್ತಾಳೆ. ಶರಣರಿಗೆ ಅತ್ಯಾಸೆ ಸಲ್ಲದು ಎಂದು ಟೀಕಿಸುತ್ತಾಳೆ. ಇಂಥ ಸ್ವವಿಮರ್ಶೆಯ ಕಾರಣದಿಂದಲೂ ವಚನಸಾಹಿತ್ಯ ಇತರ ಸಾಹಿತ್ಯಕ್ಕಿಂತಲೂ ಭಿನ್ನವಾಗಿ ಕಾಣಿಸುತ್ತದೆ.

ಕಾಯಕದ ಸಂದರ್ಭದಲ್ಲಿ ತಾವು ಕಂಡುಂಡ ಅನುಭವಗಳನ್ನು ಶರಣರು ಅನುಭವ ಮಂಟಪದಲ್ಲಿ ಶರಣರು ಹಂಚಿಕೊಳ್ಳುತ್ತಿದ್ದರು. ಅವರ ಚರ್ಚೆಯ ಮೊತ್ತವೇ ವಚನಗಳು. ವಚನ ಎನ್ನುವಂತಹದ್ದು ಹುಸಿಯಾಗುವಂತಹದ್ದಲ್ಲ. ಏಕೆಂದರೆ, ಆ ವಚನಗಳ ಹಿಂದಿರುವುದು ಮನಸ್ಸಷ್ಟೇ ಅಲ್ಲ, ಕಾಯಕದ ಅನುಭವವೂ ಇದೆ. ಬಹುಶಃ, ಹೀಗೆ ತಮ್ಮ ಕಾಯಕದ ಅನುಭವಗಳ ಮೂಲಕ ಬದುಕಿನ ಸತ್ಯಗಳನ್ನು ಕಾಣಿಸಲು ಪ್ರಯತ್ನಿಸಿದ ಸಾಹಿತ್ಯ ವಿಶ್ವದ ಯಾವ ಭಾಷೆಯಲ್ಲೂ ಇಷ್ಟು ವ್ಯವಸ್ಥಿತವಾಗಿ ಇರಲಾರದು. ಜನಪದರ ಹಾಡು–ಕಥನಗಳು ಕೂಡ ಅನುಭವಜನ್ಯವೇ. ಆದರೆ, ವಚನಗಳ ಹಿನ್ನೆಲೆಯಲ್ಲಿನ ಪ್ರಜ್ಞಾಪೂರ್ವಕ ಮನಸ್ಸನ್ನು ಅಲ್ಲಿ ಕಾಣಲಾಗದು.

ಬದುಕಿನ ಅನುಭವದ ಸಾರರೂಪವಾದುದರಲ್ಲಿ ವಚನಗಳಲ್ಲಿ ಗೊಂದಲಗಳು ಕಾಣಿಸುವುದು ಸುಲಭ. ಸರಳತೆಯ ಆಭರಣದಿಂದ ಅಲಂಕರಿಸಿಕೊಂಡಿರುವ ಅವು, ಕಾವ್ಯದಂತೆ ಅರ್ಥಸಾಧ್ಯತೆಗಳಿಂದಲೂ ಗಮನಸೆಳೆಯುತ್ತವೆ. ಬಸವಣ್ಣನವರ ವಚನವೊಂದನ್ನು ಗಮನಿಸಿ: ‘ಉಳ್ಳವರು ಶಿವಾಲಯವ ಮಾಡುವರು / ನಾನೇನು ಮಾಡಲಿ ಬಸವನಯ್ಯಾ / ಎನ್ನ ಕಾಲೇ ಕಂಬ, ದೇಹವೇ ದೇಗುಲ / ಶಿರವೇ ಹೊನ್ನ ಕಳಸವಯ್ಯಾ’. ಮೇಲ್ನೋಟಕ್ಕೆ ಸುಲಿದ ಬಾಳೆಯ ಹಣ್ಣಿನಂದದಿ ಇರುವ ಈ ವಚನ, ಒಳಹೊಕ್ಕು ನೋಡಿದರೆ ಸಮಾಜ ವಿಮರ್ಶೆಯನ್ನೇ ಒಳಗೊಂಡಿರುವಂತಿದೆ. ಮಂದಿರಗಳ ಮೂಲಕ ಆಡಂಬರದ ಭಕ್ತಿಯ ಪ್ರದರ್ಶನ ಮಾಡುವವರನ್ನು ಬಸವಣ್ಣ ಟೀಕಿಸುತ್ತಿದ್ದಾನೆ. ಉಳ್ಳವರ ಮಂದಿರದ ಪರಿಕಲ್ಪನೆಗೆ ಎದುರಾಗಿ ಬಸವಣ್ಣ ತನ್ನ ದೇಹವನ್ನೇ ಮಂದಿರವನ್ನಾಗಿ ಭಾವಿಸುವ ಮೂಲಕ ಈ ದೇಶದ ಕೋಟಿ ಕೋಟಿ ಜನಸಾಮಾನ್ಯರ ಪ್ರತಿನಿಧಿಯಾಗಿದ್ದಾನೆ. ‘ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ’ ಎನ್ನುವ ಬಸವಣ್ಣನ ಉದ್ಗಾರ ಎಲ್ಲ ಕಾಲಕ್ಕೂ ಹೊಂದುವಂತಹದ್ದು.

ಕೋವಿಡ್ ಸಂದರ್ಭದಲ್ಲಿ ಬಸವಣ್ಣನ ನೆನಪು ಬದುಕಿನ ಬಗ್ಗೆ ನಂಬಿಕೆ ಉಳಿಸುವಂತಹದ್ದು. ಸಂಸಾರವೆಂಬುದೊಂದು ಗಾಳಿಯ ಸೊಡರು, ಸಿರಿಯೆಂಬುದೊಂದು ಸಂತೆಯ ಮಂದಿ ಎಂದ ಬಸವಣ್ಣ, ನಮ್ಮ ಬದುಕಿನಲ್ಲಿ ಕೇಂದ್ರದಲ್ಲಿ ದಯೆ ಮತ್ತು ಮಾನವೀಯತೆ ಅಕ್ಷಯಪಾತ್ರೆಯಂತೆ ಇರಬೇಕು ಎಂದು ನಂಬಿದ್ದವರು, ಆ ನಂಬಿಕೆಯನ್ನೇ ಬದುಕಿ ಬಾಳಿದವರು. ಸಕಲಜೀವಗಳಲ್ಲೂ ಅನುಕಂಪವುಳ್ಳ ಆ ದಯೆ–ಮಾನವೀಯತೆಯ ‘ಬಸವಮಾರ್ಗ’ ಪ್ರಸ್ತುತ ನಮ್ಮೆಲ್ಲರಿಗೆ ಮಹಾಮಾರ್ಗ ಆಗಬೇಕಿದೆ.

ಪ್ರತಿಕ್ರಿಯಿಸಿ: feedback@sudha.co.in